ಓ.ಎಸ್. 127/2015 ಪಿಡಬ್ಲ್ಯೂ-1

ಸಾಕ್ಷಿಯನ್ನು ದಿಃ 15.03.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ. ಎಂ.ಎಸ್. ವಕೀಲರಿಂದಃ

ನನ್ನ ತಾಯಿಯ ಸ್ವಂತ ಊರು ಶಿವಮೊಗ್ಗ ಹತ್ತಿರದ ಮೈದೋಳು. ನನ್ನನ್ನು ಸವಿತಾ ಎಂಬ ಹೆಸರಿನಿಂದಲೂ ಕರೆಯುತ್ತಾರೆ ಎಂದರೆ ಸರಿ. ನಾನು ಮೈದೋಳು ಗ್ರಾಮದ ಚಿದಾನಂದಮೂರ್ತಿ ತಂದೆ ಸಿದ್ದಪ್ಪ ಎಂಬುವವರನ್ನು ಮದುವೆಯಾಗಿದ್ದೆ ಎಂದರೆ ಸರಿ. ಸದರಿ ಚಿದಾನಂದಮೂರ್ತಿ ವಿರುದ್ಧ ನಾನು ಎಂ.ಸಿ. 7/2001 ರಂತೆ ವಿಚ್ಛೇದನಕ್ಕಾಗಿ ಸಲ್ಲಿಸಿದ್ದೆ ಎಂದರೆ ಸರಿ. ಸದರಿ ದಾವೆಯನ್ನು ರಾಜೀ ಮಾಡಿಕೊಂಡು ನಾನು ಪರಿಹಾರ ಪಡೆದಿದ್ದೆ ಎಂದರೆ ಸರಿ. ನನ್ನ ಮತ್ತು ಚಿದಾನಂದಮೂರ್ತಿ ನಡುವೆ ವಿವಾಹ ವಿಚ್ಛೇದನ ಆಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಎಂ.ಸಿ. 7/2001 ರಲ್ಲಿ ಆದ ಆದೇಶದ ದಾಖಲೆಯನ್ನು ಈ ದಾವೆಯಲ್ಲಿ ಸಲ್ಲಿಸಲು ನನಗೇನು ತೊಂದರೆ ಇಲ್ಲಾ. ಎಂ.ಸಿ. 7/2001 ರಲ್ಲಿ ಜೀವನಾಂಶಕ್ಕಾಗಿ ಹಣ ಪಡೆದು ನಾನು ಸದರಿ ದಾವೆಯನ್ನು ರಾಜೀ ಮಾಡಿಕೊಂಡಿದ್ದೆ ಎಂದರೆ ಸರಿಯಲ್ಲ. ಎಂ.ಸಿ 7/2001 ರಲ್ಲಿ ನಾನು ಈಗಾಗಲೇ ಜೀವನಾಂಶಕ್ಕಾಗಿ ಹಣ ಪಡೆದಿದ್ದರೂ ಸಹ ಈಗ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಚಿದಾನಂದಮೂರ್ತಿ ಈಗಲೂ ಬದುಕಿದ್ದಾನೆ ಎಂದರೆ ಸರಿ. ನನ್ನ ಗಂಡ ಬದುಕಿದ್ದರೂ ಸಹ ನಾನು 1ನೇ ವಾದಿಯ ಮೃತ ಮಗ ಸದಾಶಿವ ನನ್ನ ಗಂಡ ಎಂದು ಸುಳ್ಳು ಹೇಳಿಕೊಂಡು ಆಸ್ತಿ ಕಬಳಿಸುವ ಸಲುವಾಗಿ ಈ ಸುಳ್ಳು ದಾವೆ ದಾಖಲಿಸಿದ್ದೇನೆ ಎನ್ನುವುದು ಸುಳ್ಳು. ನಾನು ಪ್ರತಿವಾದಿಯರ ಕುಟುಂಬದ ಸದಸ್ಯೆ ಎಂಬುದನ್ನು ತೋರಿಸಲು ದಾಖಲೆ ಕೊಟ್ಟಿದ್ದೇನೆ. ನಾನು ಪ್ರತಿವಾದಿಯರ ಜೊತೆ ವಾಸ ಮಾಡಿದ್ದೇನೆ ಎಂಬುದನ್ನು ತೋರಿಸಲು ದಾಖಲೆ ಕೊಟ್ಟಿಲ್ಲ. ನಾನು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಎಂಬುದನ್ನು ತೋರಿಸಲು ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಕೊಟ್ಟಿರಬಹುದು ಎನ್ನುತ್ತಾರೆ. ನಾನು ಮತ್ತು ಪ್ರತಿವಾದಿಯರು ಒಟ್ಟು ಕುಟುಂಬದ ಸದಸ್ಯರು ಮತ್ತು ನಾನು ಪ್ರತಿವಾದಿಯರೊಂದಿಗೆ ವಾಸ ಇದ್ದೆ ಎಂಬುದನ್ನು ತೋರಿಸಲು ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ

ಸರಿಯಲ್ಲ. ನನಗೂ ಪ್ರತಿವಾದಿಯರ ಕುಟುಂಬಕ್ಕೂ ಯಾವುದೇ ಸಂಬಂದ ಇಲ್ಲದೇ ಇರುವುದರಿಂದ ನಾನು ಆ ರೀತಿ ಯಾವುದೆ ದಾಖಲೆ ಕೊಟ್ಟಿಲ್ಲ.

1 ನೇ ವಾದಿ ನನ್ನ ಮಗಳು ದಿಃ 13.03.2006 ರಂದು ಚಿತ್ರದುರ್ಗದ ಸರ್ಕಾರಿ ಆಸ್ಪತ್ರೆಯಲ್ಲಿ ಹುಟ್ಟಿದ್ದಳು. ಸರ್ಕಾರಿ ಆಸ್ಪತ್ರೆಯಲ್ಲಿ ಮಕ್ಕಳು ಹುಟ್ಟಿದ ತಕ್ಷಣ ಸದರಿ ಮಕ್ಕಳ ತಂದೆ–ತಾಯಿ ವಿವರ, ಜನನದ ವಿವರ ನಮೂದಿಸುತ್ತಾರೆ ಎಂದರೆ ಸರಿ. ನನ್ನ ಮಗಳ ಜನನದ ವಿವರಗಳನ್ನು ತೋರಿಸುವ ದಾಖಲೆಯನ್ನು ನಾನು ಈ ದಾವೆಯಲ್ಲಿ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನನ್ನ ಮಗಳು ಹುಟ್ಟುವ ಕಾಲಕ್ಕೆ ಆಸ್ಪತ್ರೆಯವರಿಗೆ ನನ್ನ ಹೆಸರು ಸವಿತಾ ಎಂದು ಬರೆಸಿದ್ದೆ ಎಂದರೆ ಸರಿಯಲ್ಲ. ಅದೇ ರೀತಿ ನನ್ನ ಗಂಡನ ಹೆಸರು ರಾಜಪ್ಪ ಎಂದು ಹೇಳಿ ಬರೆಸಿದ್ದೆ ಎಂದರೆ ಸರಿಯಲ್ಲ. ನನ್ನ ಮಗಳು ಹುಟ್ಟುವ ಕಾಲಕ್ಕೆ ನಾನು ಆಸ್ಪತ್ರೆಯಲ್ಲಿ ನನ್ನ ಮತ್ತು ನನ್ನ ಗಂಡನ ಬಗ್ಗೆ ಕೊಟ್ಟಿದ್ದ ವಿವರದ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಡಲು ನನಗೇನು ತೊಂದರೆ ಇಲ್ಲಾ.

ಸದಾಶಿವಪ್ಪ ದಿಃ 18.11.2006 ರಂದು ತೀರಿಕೊಂಡರು. ಸದಾಶಿವಪ್ಪ ದಿಃ 18.06.2006 ರಂದು ತೀರಿಕೊಂಡಿದ್ದ ಎಂದರೆ ಸರಿಯಲ್ಲ. ನನ್ನ ಗಂಡ ಎಂದು ನಾನು ಹೇಳುತ್ತಿರುವ ಸದಾಶಿವಪ್ಪನ ಮರಣಪ್ರಮಾಣಪತ್ರವನ್ನು ನ್ಯಾಯಾಲಯಕ್ಕೆ ಕೊಟ್ಟಿರಬಹುದು. ಪಂಚಾಯಿತಿಯವರೊಂದಿಗೆ ಷರೀಕಾಗಿ ನಿಪಿ–3 ರ ದಾಖಲೆ ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತುಗಳಿಗೂ ನನಗೂ ಯಾವುದೇ ಸಂಬಂದ ಇಲ್ಲಾ ಎಂದರೆ ಸರಿಯಲ್ಲ.

ದಾವಾ ಸ್ವತ್ತು 1 ನೇ ಪ್ರತಿವಾದಿಯ ಗಂಡ ತಿಪ್ಪೇರುದ್ರಪ್ಪನ ಸ್ವತ್ತುಗಳು ಎಂದರೆ ಸರಿ. ದಾವಾ ಸ್ವತ್ತುಗಳು ಸದರಿ ತಿಪ್ಪೇರುದ್ರಪ್ಪನಿಗೆ ಪಾಲುವಿಭಾಗದಲ್ಲಿ ಬಂದಿತ್ತು ಎಂದರೆ ಸರಿ. ತಿಪ್ಪೇರುದ್ರಪ್ಪ ಯಾವಾಗ ತೀರಿಕೊಂಡ ಎಂದು ನನಗೆ ಗೊತ್ತಿಲ್ಲ. ನಾನು ಪ್ರತಿವಾದಿಯರ ಕುಟುಂಬಕ್ಕೆ ಸೇರಿದ್ದೇ ಆಗಿದ್ದಲ್ಲಿ, ತಿಪ್ಪೇರುದ್ರಪ್ಪ ಯಾವಾಗ ತೀರಿಕೊಂಡ ಎಂದು ನನಗೆ ಗೊತ್ತಿರುತ್ತಿತ್ತು ಎಂದರೆ ಸಾಕ್ಷಿ ಆ ಬಗ್ಗೆ ಈಗ ಮರೆತು ಹೋಗಿದೆ ಎನ್ನುತ್ತಾರೆ.

ದಾವಾ ಸ್ವತ್ತುಗಳನ್ನು 1 ನೇ ಪ್ರತಿವಾದಿಯ ಗಂಡ ತಿಪ್ಪೇರುದ್ರಪ್ಪ ಆತನ ಮಗ ಸದಾಶಿವಪ್ಪ ತೀರಿಕೊಂಡ ನಂತರ ಆತನ ಹೆಂಡತಿ ಮತ್ತು ಮಗಳಾದ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ವಿಲ್

ಮೂಲಕ ವರ್ಗಾಯಿಸಿದ್ದಾನೆ ಎನ್ನುವುದು ಸುಳ್ಳು. ತಿಪ್ಪೇರುದ್ರಪ್ಪ ಬರೆದಿರುವ ವಿಲ್ ಪ್ರಕಾರ ಪ್ರತಿವಾದಿಯರೇ ದಾವಾ ಸ್ವತ್ತುಗಳ ಏಕಸ್ವಾಮ್ಯ ಮಾಲೀಕ ಮತ್ತು ಹಕ್ಕುದಾರರು ಎನ್ನುವುದು ಸುಳ್ಳು. ಸದರಿ ವಿಲ್ ಪ್ರಕಾರವೇ ದಾವಾ ಸ್ವತ್ತುಗಳ ಖಾತೆಗಳು ಪ್ರತಿವಾದಿಯರ ಹೆಸರಿಗೆ ಬದಲಾವಣೆಗೊಂಡಿದೆ ಎನ್ನುವುದು ಸುಳ್ಳು. ಈಗಲೂ ಸಹ ದಾವಾ ಸ್ವತ್ತಿನ ಖಾತೆಗಳು 1 ನೇ ಪ್ರತಿವಾದಿಯ ಹೆಸರಿನಲ್ಲಿದೆ ಎನ್ನುವುದು ಸುಳ್ಳು.

ತಿಪ್ಪೇರುದ್ರಪ್ಪ ಮತ್ತು 1 ನೇ ಪ್ರತಿವಾದಿಯ ಮಗ ಸದಾಶಿವಪ್ಪನಿಗೆ ಆರೋಗ್ಯ ಸರಿಯಿಲ್ಲದೇ ಇರುವುದರಿಂದ, ಆತನಿಗೆ ಮದುವೆ ಕೂಡ ಆಗಿರಲಿಲ್ಲ ಮತ್ತು ಆತ ದಿಃ 18.06.2006 ರಂದು ಮದುವೆಯಾಗದೇ ತೀರಿಕೊಂಡ ಎನ್ನುವುದು ಸುಳ್ಳು. ತಿಪ್ಪೇರುದ್ರಪ್ಪ ಬದುಕಿದ್ದಾಗ ದಾವಾ ಸ್ವತ್ತಿನ ಮಾಲೀಕನಾಗಿ ಅದನ್ನು ಅನುಭವಿಸುತ್ತಿದ್ದ ಎನ್ನುವುದು ಸರಿಯಲ್ಲ. ತಿಪ್ಪೇರುದ್ರಪ್ಪ ತೀರಿಕೊಂಡ ನಂತರ ಆತನ ಹೆಂಡತಿ ಮತ್ತು ಮಗಳಾದ ಪ್ರತಿವಾದಿಯರೇ ದಾವಾ ಸ್ವತ್ತಿನ ಮಾಲೀಕರಾಗಿ ಅದನ್ನು ಅನುಭವಿಸುತ್ತಿದ್ದಾರೆ ಎನ್ನುವುದು ಸುಳ್ಳು. ದಾವಾ ಸ್ವತ್ತುಗಳನ್ನು ಪ್ರತಿವಾದಿಯರೇ ಯಾರ ಅಡ್ಡಿ ಆತಂಕ ಇಲ್ಲದೇ ದಾವಾ ಸ್ವತ್ತುಗಳ ಸ್ವಾಧೀನದಲ್ಲಿದ್ದಾರೆ ಎನ್ನುವುದು ಸುಳ್ಳು.

2 ನೇ ಪ್ರತಿವಾದಿಯ ಗಂಡನ ಹೆಸರು ಪ್ರಕಾಶ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು ತಿಪ್ಪೇರುದ್ರಪ್ಪನ ಮಗ ಸದಾಶಿವಪ್ಪ ತೀರಿಕೊಂಡಿದ್ದರಿಂದ, 2 ನೇ ಪ್ರತಿವಾದಿಯ ಗಂಡ ಪ್ರಕಾಶ ಈಗ ದಾವಾ ಸ್ವತ್ತುಗಳನ್ನು ನೋಡಿಕೊಳ್ಳುತ್ತಾನೆ ಎಂದರೆ ಸರಿ. ಸದಾಶಿವಪ್ಪನ ತಾಯಿಯಾದ 1 ನೇ ಪ್ರತಿವಾದಿ ಮತ್ತು ಆತನ ತಂಗಿ 2 ನೇ ಪ್ರತಿವಾದಿಯರಿಬ್ಬರೇ ಈಗ ಇರುವ ಜೀವಂತ ವಾರಸುದಾರರು ಎನ್ನುವುದು ಸುಳ್ಳು. ಸಾಕ್ಷಿ ಸ್ವ-ಇಚ್ಛೆಯಿಂದ ನಾನು ಮತ್ತು ನನ್ನ ಮಗಳು 1 ನೇ ವಾದಿ ಸಹ ಸದಾಶಿವಪ್ಪನ ವಾರಸುದಾರರು ಎನ್ನುತ್ತಾರೆ. ಸದಾಶಿವಪ್ಪನ ಹೆಂಡತಿ ಮತ್ತು ಮಗಳು ಎಂದು ತೋರಿಸಲು ನಾನು ಪಂಚಾಯಿತಿಯಿಂದ ಯಾವುದೇ ದಾಖಲೆ ಪಡೆದಿಲ್ಲ. ಆ ರೀತಿ ದಾಖಲೆ ಪಡೆಯಬೇಕು ಎಂದು ನನಗೆ ಗೊತ್ತಿರಲಿಲ್ಲ.

ನಾನು ಸದಾಶಿವಪ್ಪನ ಕಾನೂನು ಬದ್ಧ ಹೆಂಡತಿ ಆಗಿಲ್ಲದೇ ಇರುವುದರಿಂದ, ವಾರಸುದಾರಿಕೆ ಪ್ರಮಾಣಪತ್ರವನ್ನು ಪಡೆದಿಲ್ಲ ಎನ್ನುವುದು ಸುಳ್ಳು.

ಪ್ರತಿವಾದಿಯರು ಈಗ ಚಿತ್ರಹಳ್ಳಿಗೇಟಿನಲ್ಲಿ ವಾಸವಿರುತ್ತಾರೆ ಎಂದರೆ ಸಾಕ್ಷಿ ಚಿತ್ರಹಳ್ಳಿ ಗ್ರಾಮದಲ್ಲಿ ವಾಸವಿದ್ದಾರೆ ಎನ್ನುತ್ತಾರೆ. ನಾನು ಕಳೆದ ಒಂದು ವರ್ಷಗಳಿಂದ ಮಗಳ ವಿದ್ಯಾಭ್ಯಾಸದ ಸಲುವಾಗಿ

ಚಿತ್ರದುರ್ಗದಲ್ಲಿ ವಾಸವಿದ್ದೇನೆ ಅದಕ್ಕೂ ಮೊದಲು ನಾನು ಚಿತ್ರಹಳ್ಳಿ ಗೇಟಿನಲ್ಲಿ ವಾಸಮಾಡುತ್ತಿದ್ದೆನು ಈಗ ನಾನು ಚಿತ್ರದುರ್ಗದ ಮಾಳಪ್ಪನಹಟ್ಟಿಯಲ್ಲಿ ವಾಸವಿದ್ದೇನೆ ಎಂದರೆ ಸರಿ. ನಾನು ಈ ದಾವೆ ದಾಖಲಿಸುವುದಕ್ಕೂ ಮೊದಲಿನಿಂದಲೂ ಮಾಳಪ್ಪನಹಟ್ಟಿಯಲ್ಲಿ ವಾಸವಿದ್ದೇನೆ ಎನ್ನುವುದು ಸುಳ್ಳು.

ಪ್ರತಿವಾದಿಯರು ಈ ದಾವೆಯಲ್ಲಿ ಏನು ತಕರಾರು ಸಲ್ಲಿಸಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯರ ಪ್ರತಿವಾದ ಪತ್ರವನ್ನು ನಾನು ನಮ್ಮ ವಕೀಲರ ಮೂಲಕ ಓದಿಸಿ ತಿಳಿದು ಕೊಂಡಿದ್ದೇನೆ.

ನನ್ನ ಮದುವೆ 1ನೇ ಪ್ರತಿವಾದಿಯ ಮಗ ಸದಾಶಿವನೊಂದಿಗೆ 2004 ರಲ್ಲಿ ಹರಿಹರದ ಹರಿಹರಲಿಂಗೇಶ್ವರ ದೇವಸ್ಥಾನದಲ್ಲಿ ಆಗಿತ್ತು. ಸದರಿ ದೇವಸ್ಥಾನ ಮುಜರಾಯಿ ಇಲಾಖೆಗೆ ಸೇರಿದ್ದು ಎಂದರೆ ಸರಿ. ಸದರಿ ದೇವಸ್ಥಾನದಲ್ಲಿ ನಡೆಯುವ ಮದುವೆ, ಇತ್ಯಾದಿ ಕಾರ್ಯಗಳಿಗೆ ಸಂಬಂದಪಟ್ಟಂತೆ ರಸೀದಿ ಕೊಡಲಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಹರಿಹರೇಶ್ವರ ದೇವಸ್ಥಾನದಲ್ಲಿ ನಿಮ್ಮ ಮದುವೆ ಸದಾಶಿವನೊಂದಿಗೆ ಆಗಿತ್ತು ಎಂಬುದನ್ನು ತೋರಿಸಲು ದಾಖಲೆ ತಂದು ಹಾಜರುಪಡಿಸಲು ನಿಮಗೇನಾದರೂ ತೊಂದರೆ ಇದೆಯೋ ಎಂದರೆ ಸಾಕ್ಷಿ ಸದರಿ ದಾಖಲೆ ಈಗ ಸಿಗುತ್ತದೋ ಇಲ್ಲವೋ ನನಗೆ ಗೊತ್ತಿಲ್ಲ. ನನ್ನ ಮದುವೆ ನಾನು ಹೇಳುವಂತೆ ಸದಾಶಿವನೊಂದಿಗೆ ಹರಿಹರೇಶ್ವರ ದೇವಸ್ಥಾನದಲ್ಲಿ ಆಗಿಲ್ಲದೇ ಇರುವುದರಿಂದ, ಆ ಬಗ್ಗೆ ನನ್ನ ಬಳಿ ಯಾವುದೇ ದಾಖಲೆ ಇಲ್ಲಾ ಎಂದರೆ ಸರಿಯಲ್ಲ. ನನ್ನ ಮದುವೆಯನ್ನು ನನ್ನ ಪೋಷಕರು ಮತ್ತು ಸಂಬಂಧಿಕರು ಸೇರಿ ಸದಾಶಿವನೊಂದಿಗೆ ಮಾಡಿದ್ದರು. ನನ್ನ ಮದುವೆಗೆ ಸದಾಶಿವನ ಮನೆಯವರು ಯಾರೂ ಬಂದಿರಲಿಲ್ಲ, ಕಾರಣ ಸದಾಶಿವ ನನ್ನನ್ನು ಮದುವೆಯಾಗುವುದು ಅವರ ಮನೆಯವರಿಗೆ ಯಾರಿಗೂ ಇಷ್ಟ ಇರಲಿಲ್ಲ. ನಾನು ಸದಾಶಿವನೊಂದಿಗಿನ ನನ್ನ ಮದುವೆಯನ್ನು ನೊಂದಣಿ ಮಾಡಿಸಿರಲಿಲ್ಲ. ನನ್ನ ಮತ್ತು ಸದಾಶಿವನೊಂದಿಗಿನ ಮದುವೆ ಶಾಸ್ತ್ರವನ್ನು ನನ್ನ ಚಿಕ್ಕಮ್ಮನಾದ ಶಾಂತ ಎಂಬುವವರು ಮಾಡಿದ್ದರು. ಸದಾಶಿವನೊಂದಿಗೆ ನನ್ನ ಮದುವೆ ನೆರವೇರಿಸಿದ ಅರ್ಚಕರ ಹೆಸರು ನನಗೆ ನೆನಪಿಲ್ಲ ಮತ್ತು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ತಿಳಿದು ಕೊಳ್ಳಲು ಪ್ರಯತ್ನ ಪಟ್ಟಿಲ್ಲ.

ನಿಪಿ–5 ರಿಂದ 7 ರ ಪೋಟೋಗಳನ್ನು ಹರಿಹರೇಶ್ವರ ದೇವಸ್ಥಾನದಲ್ಲಿ ತೆಗೆಯಲಾಗಿದೆ. ನಿಪಿ–5 ರಿಂದ 7 ರ ಪೋಟೋಗಳನ್ನು ಈ ದಾವೆ ಸಲ್ಲಿಸುವ ಸಲುವಾಗಿ ಸೃಷ್ಟಿಸಲಾಗಿದೆ ಮತ್ತು ಆ ಕಾರಣದಿಂದಲೇ

ಸದರಿ ಫೋಟೋಗಳು ಸ್ಪಷ್ಟವಾಗಿ ಮೂಡಿ ಬಂದಿಲ್ಲ ಎನ್ನುವುದು ಸರಿಯಲ್ಲ.

ನಿಪಿ–3 ರಿಂದ 10 ರ ದಾಖಲೆಗಳನ್ನು ಈ ದಾವೆಗಾಗಿ ಸೃಷ್ಟಿಸಿಕೊಂಡಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ–9 ಮತ್ತು 10 ರ ದಾಖಲೆಗಳನ್ನು ಬರೆಸುವ ಸಲುವಾಗಿ ನಾನೇ ಮಾಹಿತಿ ಕೊಟ್ಟಿದ್ದೆನು. ನಾನು ಪ್ರತಿವಾದಿಯರ ಮನೆಯ ಸದಸ್ಯೆ ಆಗದೇ ಇರುವುದರಿಂದ, ನಿಪಿ–10 ರ ಪಡಿತರ ಚೀಟಿಯಲ್ಲಿ ನನ್ನ ಒಬ್ಬಳ ಹೆಸರಿನ ನಮೂದು ಇದೆ ಎಂದರೆ ಸರಿಯಲ್ಲ. ನಿಪಿ–10 ರ ದಾಖಲೆಯಲ್ಲಿ ನನ್ನ ಒಬ್ಬಳ ಹೆಸರು ಮಾತ್ರ ನಮೂದು ಇದೆ ಎಂದರೆ ಸರಿ.

ಪ್ರತಿವಾದಿಯರೊಂದಿಗೆ ಸುಳ್ಳು ಸಂಬಂದ ಕಲ್ಪಿಸಿಕೊಂಡು ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗಾಗಿ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗಾಗಿ ಮುಂದೂಡಲಾಯಿತು**).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಗಿದೆ )

ಓ. ಹೇ, ಕೇ, ಸರಿ ಇದೆ,

ಅಪರ ಸಿವಿಲ್ ನ್ಯಾಯಾಧೀಶರು,
ಹೊಳಲ್ಕೆರೆ.